ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್-04/2022 ದಿನಾಂಕ: 13-01-2023

**ಪ್ರಕಟಣೆ**

ಮೊದಲನೇ ಸುತ್ತಿನ ಸೀಟು ಹಂಚಿಕೆ – ಡಿಸಿಇಟಿ – 2022

**ಡಿಸಿಇಟಿ-2022** – ಎರಡನೇ ವರ್ಷದ / ಮೂರನೇ ಸೆಮಿಸ್ಟರ್ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಾತಿಗೆ ಹಾಗು ಮೊದಲನೇ ವರ್ಷದ ಆರ್ಕಿಟೆಕ್ಚರ್ ಕೋರ್ಸಿಗೆ **ದಿನಾಂಕ 13-01-2023 ರಂದು ಸರ್ಕಾರವು ಸೀಟ್ ಮ್ಯಾಟ್ರಿಕ್ಸ್ ಅನ್ನು ನೀಡಿದ್ದು,** ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ. ಮುಂದುವರಿದು, ಈ ಹಿನ್ನಲೆಯಲ್ಲಿ ಮೊದಲನೇ ಸುತ್ತಿನ ಸೀಟು ಹಂಚಿಕೆಯನ್ನು ಈ ಕೆಳಕಂಡ ಪರಿಷ್ಕೃತ ವೇಳಾಟ್ಟಿಯಂತೆ ನಡೆಸಲಾಗುವುದು.

**ಗಮನಿಸಿ:** ವಿದ್ಯಾರ್ಥಿಗಳು ಇಚ್ಛೆಗಳನ್ನು ಆರಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ, ಮನೆಯಲ್ಲಿ ಪೂರ್ವಾಭ್ಯಾಸ ಮಾಡದೆ, ಅಂತರ್ಜಾಲದಲ್ಲಿನ ಆನ್‌ಲೈನ್ ಆಯ್ಕೆ ನಮೂನೆಯಲ್ಲಿ ನೇರವಾಗಿ ತಮ್ಮ ಇಚ್ಛೆಗಳನ್ನು ನಮೂದಿಸಬಾರದೆಂದು ಸಲಹೆ ನೀಡಲಾಗಿದೆ. ಸೀಟು ಹಂಚಿಕೆ ಮಾಡುವುದಕ್ಕಾಗಿ ತಮಗೆ ಇಷ್ಟವಿರುವ ಕೋರ್ಸು, ಕಾಲೇಜುಗಳಿಗೆ ಇಚ್ಛೆಗಳನ್ನು ನಮೂದಿಸುವಾಗ ವಿದ್ಯಾರ್ಥಿಗಳು ಅತ್ಯಂತ ಎಚ್ಚರಿಕೆಯಿಂದ ನಮೂದಿಸಬೇಕು. ಸೀಟ್ ಮ್ಯಾಟ್ರಿಕ್ಸ್ ಪಟ್ಟಿಯನ್ನು ಸರಿಯಾಗಿ ಅಭ್ಯಾಸ ಮಾಡಿ ಮೊದಲು ನಿಮಗೆ ಇಚ್ಛೆಯಿರುವ ಕೋರ್ಸು/ ಕಾಲೇಜುಗಳ ಒಂದು ಪಟ್ಟಿಯನ್ನು ಮಾಡಿಕೊಳ್ಳಿ, ಇಚ್ಛೆಯನ್ನು (Option) ನಮೂದಿಸುವಾಗ, ಆದ್ಯತಾ ಕ್ರಮ (prioritization) ಅನುಸರಿಸಿ. ನಿಮಗೆ ಅತ್ಯಂತ ಹೆಚ್ಚು ಇಷ್ಟವಿರುವ ಕೋರ್ಸನ್ನು/ ಕಾಲೇಜುಗಳನ್ನು ಮೊದಲ ಆದ್ಯತೆಯ ಕ್ರಮ ಸಂಖ್ಯೆಗಳಲ್ಲಿ ನಮೂದಿಸಿ. ಆನಂತರ ಇಷ್ಟವಿರುವ ಇತರ ಕೋರ್ಸುಗಳು/ ಕಾಲೇಜುಗಳ ಇಚ್ಛೆಯನ್ನು ನಮೂದಿಸಿ. ಹೀಗೆ ಮೊದಲಿನ ಇಚ್ಛೆಗೆ ಶೇ. 100ರಷ್ಟು ಆದ್ಯತೆಯೆಂದು ಪರಿಗಣಿಸಿದರೆ, ನಂತರದ ಆದ್ಯತೆಗಳು ಇಳಿಕೆ/ಅವರೋಹಣ (descending) ಕ್ರಮದಲ್ಲಿ ಇರಬೇಕು.

First round Seat Allotment – DCET - 2022

DCET-2022 – For admission to 2nd Year / 3rd Semester Engineering Courses and admission to first year Architecture, on 13-01-2023 Government has issued the seat matrix and the same has been published on the KEA Website for the information of the candidates. First round seat allotment will be conducted as per the following revised schedule.

**NOTE:** Candidates are advised not to start entering the options directly on the online option form on the internet without preparatory work at home on choice of options, as it leads to commission of mistakes / wrong entries / wrong order of preferences. The candidate should note the name of the college, the course offered in a separate sheet of paper. The priority of options among the colleges selected should be noted down.

......2

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in

| | | |
|---|---|---|
| **DCET-2022 - 1st Round Seat allotment Revised Schedule**<br>ಡಿಸಿಇಟಿ-2022 – ಮೊದಲನೇ ಸುತ್ತಿನ ಸೀಟು ಹಂಚಿಕೆಯ ಪರಿಷ್ಕೃತ ವೇಳಾಪಟ್ಟಿ | | |
| 1 | Display of Seat Matrix and Fee Structure<br>ಸೀಟ್ ಮ್ಯಾಟ್ರಿಕ್ಸ್ ಮತ್ತು ಶುಲ್ಕದ ವಿವರಗಳ ಪ್ರಕಟಣೆ | 13-01-2023 – After 4.00 pm |
| 2 | Option Entry by eligible candidates (in the order of preference)<br>ಇಚ್ಛೆ / ಆಯ್ಕೆಗಳನ್ನು ದಾಖಲಿಸುವುದು. (ಆದ್ಯತಾ ಕ್ರಮದಲ್ಲಿ) | From 11.00 am on 16-01-2023 to 18-01-2023 up to 11.00 am |
| 3 | Publication of Mock Allotment Results<br>ಅಣಕು ಸೀಟು ಹಂಚಿಕೆಯ ಫಲಿತಾಂಶ | 18-01-203 after 6.00 pm |
| 4 | Provision to change option entry by eligible candidates (add / alter / rearrange / delete the options)<br>ಆಯ್ಕೆಗಳನ್ನು ಬದಲಾಯಿಸಲು ಅವಕಾಶ<br>(ಸೇರಿಸಿ / ಅಳಿಸಿ / ಬದಲಾಯಿಸಿ / ಮಾರ್ಪಡಿಸಿ) | From 7.00 pm on 18-01-2023 to 20-01-2023 up to 8.00 am |
| 5 | Publication of first round allotment Result<br>ನೈಜ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ | 20-01-203 after 2.00 pm |
| 6 | Exercising Choices by the seat allotted candidates<br>ಪೋಷಕರ ಜೊತೆ ಚರ್ಚಿಸಿ ಸೂಕ್ತವಾದ CHOICE ಅನ್ನು ಆಯ್ಕೆ ಮಾಡಿಕೊಳ್ಳಲು | From 7.00 pm on 20-01-2023 to 22-01-2023 up to 11.59 pm |
| 7 | Payment of fees and downloading of Admission Order (payment of fees by Choice-1 and Choice-2 candidates; Choice 1 and Choice-2 ಆಯ್ಕೆ ಮಾಡಿದ ಅಭ್ಯರ್ಥಿಗಳು ಶುಲ್ಕ ಪಾವತಿ ಮಾಡುವುದು | 21-01-2023 to 24-01-2023 |
| 8 | Downloading of admission orders only by Choice-1, after payment<br>Choice 1 ಆಯ್ಕೆ ಮಾಡಿದ ಅಭ್ಯರ್ಥಿಗಳು ಶುಲ್ಕ ಪಾವತಿ ನಂತರ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳುವುದು | 23-01-2023 to 25-01-2023 |
| 9 | Last Date for Reporting at the Allotted College (Choice -1 Candidates Only) with one set of attested photocopies as per verification slip<br>(ಎಲ್ಲಾ ದೃಢೀಕರಿಸಿದ ದಾಖಲಾತಿಗಳೊಂದಿಗೆ – Verification slip ನಲ್ಲಿ ನಮೂದಿಸಿರುವಂತೆ) | 27-01-2023 – 5.30 pm |

ವಿ.ಸೂ. ಈ ಮೇಲ್ಕಂಡ ವೇಳಾಪಟ್ಟಿಯ ಬಗ್ಗೆ ಅಭ್ಯರ್ಥಿಗಳಿಗೆ ವೈಯಕ್ತಿಕವಾಗಿ ಮಾಹಿತಿಯನ್ನು ಕಳುಹಿಸಲಾಗುವುದಿಲ್ಲ.

ಕಾರ್ಯನಿರ್ವಾಹಕ ನಿರ್ದೇಶಕರು